# ಎನ್‌ಐಟಿಕೆ: ಶ್ರೀನಿವಾಸ್ ಮಲ್ಯ ಅವರ 121ನೇ ಜನ್ಮದಿನಾಚರಣೆ



**ಸುರತ್ಕಲ್, ನ.21:** ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆ ಕರ್ನಾಟಕ (ಎನ್‌ಐಟಿಕೆ) ಇದರ ಸಂಸ್ಥಾಪಕ ಯು.ಶ್ರೀನಿವಾಸ್ ಮಲ್ಯ ಅವರ 121 ನೇ ಜನ್ಮ ದಿನಾಚರಣೆಯನ್ನು ಎನ್‌ಐಟಿಕೆ ಕ್ಯಾಂಪಸಿನಲ್ಲಿ ಮಂಗಳವಾರ ಆಚರಿಸಲಾಯಿತು.

ಆಧುನಿಕ ದಕ್ಷಿಣ ಕನ್ನಡ ಜಿಲ್ಲೆಯ ಪಿತಾಮಹ ಮಲ್ಯ ಅವರ ನಿರಂತರ ದೂರದೃಷ್ಟಿ ಮತ್ತು ಅಚಲ ಸಮರ್ಪಣೆ ಎನ್‌ಐಟಿಕೆಯ ಬೆಳವಣಿಗೆ ಮತ್ತು ಯಶಸ್ಸಿನ ಮೂಲಾಧಾರವಾಗಿದೆ. 1946ರಿಂದ 1965ರವರೆಗೆ 18 ವರ್ಷಗಳ ಕಾಲ ಸಂಸತ್ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ದೂರದೃಷ್ಟಿಯು ನವ ಮಂಗಳೂರು ಬಂದರು, ಬಜಪೆ ವಿಮಾನ ನಿಲ್ದಾಣ, ರಾಷ್ಟ್ರೀಯ ಹೆದ್ದಾರಿ 66 ಮತ್ತು ಮುಖ್ಯವಾಗಿ ಕರ್ನಾಟಕ ಪ್ರಾದೇಶಿಕ ಎಂಜಿನಿಯರಿಂಗ್ ಕಾಲೇಜು (ಈಗ ಎನ್ ಐಟಿಕೆ) ನಿರ್ಮಾಣಕ್ಕೆ ಕಾರಣವಾಯಿತು ಎಂದು ಎನ್ ಐಟಿಕೆ ನಿರ್ದೇಶಕ ಪ್ರೊ|ಬಿ. ರವಿ ಸ್ಮರಿಸಿಕೊಂಡರು. ಎನ್‌ಐಟಿಕೆ ಉಸ್ತುವಾರಿ ನಿರ್ದೇಶಕ ಮತ್ತು ಡೀನ್ ರಿಸರ್ಚ್ ಅಂಡ್ ಕನ್ಸಲ್ಟೆನ್ಸಿ ಪ್ರೊ| ಎಸ್. ಎಂ.ಕುಲಕರ್ಣಿ, ರಿಜಿಸ್ಟ್ರಾರ್, ವಿವಿಧ ವಿಭಾಗದ ಮುಖ್ಯಸ್ಥರುಗಳು, ಎನ್‌ಐಟಿಕೆ ಹಳೆಯ ವಿದ್ಯಾರ್ಥಿಗಳು, ಸಿಬಂದಿ ಮತ್ತು ವಿದ್ಯಾರ್ಥಿಗಳು ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

Udayavani, Date:22/11/23, p, no - 06_ Sudin